4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

ಎಸ್.ಸಿ. ಕೇಸ್ ನಂ. 118/2019

ಪ್ರಾ.ಸಾ. 16

ಚಾ.ಸಾ. 37

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 20.01.2026

ಸಾಕ್ಷಿದಾರರ ಹೆಸರು	ಡಾ.ಜಿ.ಬಿ.ಚಿಕ್ಕಬೋರೇಗೌಡ
ತಂದೆಯ ಹೆಸರು	ಲೇಟ್ ಬಿ.ಬೋರೇಗೌಡ
ವಯಸ್ಸು	57 ವರ್ಷ
ಉದ್ಯೋಗ	ಹಿರಿಯ ತಜ್ಞ ವೈದ್ಯರು, ಜನರಲ್ ಆಸ್ಪತ್ರೆ, ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ
ವಾಸ	ಗುಡಿಬಂಡೆ

ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:

.1. ನಾನು ದಿನಾಂಕ 25.06.2012 ರಿಂದ ದಿನಾಂಕ 10.07.2025 ವರೆಗೆ ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 25.12.2016 ರಂದು ನಾನು ಕರ್ತವ್ಯದಲ್ಲಿದ್ದಾಗ ರಾತ್ರಿ 8.30 ಗಂಟೆ ಸಮಯಕ್ಕೆ ಮುತ್ತುರಾಜು, ಹೇಮಂತ ಕುಮಾರ್ ಎಂಬುವವರು

ಹಲ್ಲೆಯ ಇತಿಹಾಸದೊಂದಿಗೆ ಮದ್ದೂರು ಸರ್ಕಾರಿ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಮದ್ದೂರು ಪೊಲೀಸರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಅವರಲ್ಲಿ ಮುತ್ತುರಾಜನು ತಮಗೆ ಚನ್ನೇಗೌಡ ಮತ್ತು ಇತರರು ತೊಪ್ಪನಹಳ್ಳಿಯಲ್ಲಿ ಸಂಜೆ 6.30 ಗಂಟೆಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ. ನಾನು ಆ ಇಬ್ಬರನ್ನೂ ಕೂಡ ತುರ್ತು ಚಿಕಿತ್ಸಾ ವಿಭಾಗದಲ್ಲಿ ಪರೀಕ್ಷೆ ಮಾಡಿದೆ. ಅವರಲ್ಲಿ ಮುತ್ತುರಾಜನಿಗೆ ತಲೆಯ ಮುಂಭಾಗದಲ್ಲಿ ಕುಯ್ದು ಗಾಯ ಇತ್ತು. ತಲೆಯ ಎಡಭಾಗದಲ್ಲಿ ಕುಯ್ದು ಗಾಯ ಇತ್ತು. ಎರಡೂ ಕೈಗಳಲ್ಲಿ ತುಂಬಾ ನೋವು ಇದೆ ಎಂದು ಹೇಳಿದ್ದಾರೆ.

.

.3. ಹೇಮಂತಕುಮಾರನನ್ನು ಪರೀಕ್ಷಿಸಿದಾಗ ಆತನ ಎಡತೋಳಿನಲ್ಲಿ ಕುಯ್ದು ಗಾಯ ಇತ್ತು. ತಲೆಯ ಹಿಂಭಾಗದಲ್ಲಿ ಕೂಡ ಕುಯ್ದು ಗಾಯ ಇತ್ತು. ಆ ಇಬ್ಬರಿಗೂ ಕೂಡ ನಾನು ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಯಲ್ಲಿಯೇ ನಿಗಾವಣೆಯಲ್ಲಿ ಇಟ್ಟಿದ್ದೇನೆ. ಬಳಿಕ ಅವರಿಬ್ಬರನ್ನೂ ಕೂಡ ಪೊಲೀಸರು ಆಸ್ಪತ್ರೆಯಿಂದ ಕರೆದುಕೊಂಡು ಹೋದರು. ಆ ಇಬ್ಬರು ಆಸ್ಪತ್ರೆಗೆ ಹಲ್ಲೆಯಾದ ಗಾಯದ ಇತಿಹಾಸದೊಂದಿಗೆ ದಾಖಲು ಆದ ಕಾರಣ ಮಾಹಿತಿಯನ್ನು ನಮ್ಮ ಆಸ್ಪತ್ರೆಯ ಎಂಎಲ್ ಸಿ ದಾಖಲಾತಿ ಪುಸ್ತಕದಲ್ಲಿ ನಮೂದು ಮಾಡಿದ್ದೇನೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದೇನೆ. ಎಂ ಎಲ್ ಸಿ ದಾಖಲಾತಿ ಪುಸ್ತಕದ ದೃಢೀಕೃತ ನಕಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.19 ಮತ್ತು ನಿಪಿ.20 ಎಂದು ಗುರುತಿಸಲಾಯಿತು. ಸದರಿ ಮುತ್ತುರಾಜು ಮತ್ತು ಹೇಮಂತ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದ ಬಗ್ಗೆ ಮತ್ತು ಗಾಯಗಳನ್ನು ನಾನು ಗಮನಿಸಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರಗಳನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ. ಅವುಗಳನ್ನು ಗುರುತಿಸಬಲ್ಲೆ. ಸಾಕ್ಷಿ ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21 ಎ ಎಂದು ಗುರುತಿಸಲಾಯಿತು. ಸಾಕ್ಷಿ ಚಾಸಾ.2 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು

ನಿಪಿ.22 ಎಂದು, ಸಾಕ್ಷಿಯ ಸಹಿಯನ್ನು ನಿಪಿ.22 ಎ ಎಂದು ಗುರುತಿಸಲಾಯಿತು.

.

.4. ದಿನಾಂಕ 28.09.2017 ರಂದು ಪೊಲೀಸ್ ಉಪಾಧೀಕ್ಷಕರು ಮನವಿ ನೀಡಿ ಚಾಸಾ.1 ಮತ್ತು 2 ರವರಿಗೆ ಆದ ಗಾಯಗಳು ಮತ್ತು ನಿಪಿ.21 ಮತ್ತು ನಿಪಿ.22 ರಲ್ಲಿ ನಮೂದಿಸಿದ ಗಾಯಗಳು ಟಮೊಟೋ ಗಳದಿಂದ ಹೊಡೆದರೆ ಆಗುವ ಸಾಧ್ಯತೆ ಇದೆಯೇ ಎಂಬ ಬಗ್ಗೆ ಅಭಿಪ್ರಾಯ ಕೇಳಿದ್ದಾರೆ. ಸದರಿ ಮನವಿಯನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಮನವಿಯನ್ನು ನಿಪಿ.23 ಎಂದು ಗುರುತಿಸಲಾಯಿತು. ನಾನು ದಿನಾಂಕ 28.09.2017 ರಂದು ನಿಪಿ.21 ಮತ್ತು ನಿಪಿ.22 ರಲ್ಲಿ ನಮೂದಿಸಿದ ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯ ನೀಡಿದ್ದೇನೆ. ಸಾಕ್ಷಿ ಗುರುತಿಸಿದ ತನ್ನ ಅಭಿಪ್ರಾಯವನ್ನು ನಿಪಿ.24 ಎಂದು, ಸಾಕ್ಷಿಯ ಸಹಿಯನ್ನು ನಿಪಿ.24 ಎ ಎಂದು ಗುರುತಿಸಲಾಯಿತು.

.

ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ.ಎಸ್.ಭಟ್

ವಕೀಲರಿಂದಃ

1. ದಿನಾಂಕ 25.12.2016 ರಲ್ಲಿ ತೊಪ್ಪನಹಳ್ಳಿಯಲ್ಲಿ ನಡೆದಿತ್ತು ಎಂದು ಹೇಳಲಾದ ಘಟನೆಗೆ ಸಂಬಂಧಪಟ್ಟ ಹಾಗೇ ನಮ್ಮ ರಿಜಿಸ್ಟರ್ ಪ್ರಕಾರ ಮುತ್ತುರಾಜು ಬಿನ್ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ ಸಂಜೆ 7.15 ಗಂಟೆಗೆ, ಚನ್ನೇಗೌಡ ಬಿನ್ ಮಲ್ಲಯ್ಯ ಸಂಜೆ 7.25 ಗಂಟೆಗೆ, ನಂದೀಶ್ ಬಿನ್ ಪುಟ್ಟಸ್ವಾಮಿ ಸಂಜೆ 7.30 ಗಂಟೆಗೆ, ಹೊನ್ನಯ್ಯ ಬಿನ್ ಚನ್ನೇಗೌಡ ಸಂಜೆ 7.25 ಗಂಟೆಗೆ, ಮುತ್ತುರಾಜು ಬಿನ್ ರಾಮೇಗೌಡ ರಾತ್ರಿ 8.10 ಗಂಟೆಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲು ಆದ ಬಗ್ಗೆ ನಮೂದು ಇದೆ. ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ ನಂದೀಶ ಎನ್ನುವವರು ಸ್ಪಂದಿಸುತ್ತಿಲ್ಲ ಎಂದು ಸದರಿ ವಹಿಯಲ್ಲಿ ನಮೂದು ಇದೆ. ನನ್ನ ಪ್ರಕಾರ ರಾತ್ರಿ 7.30 ಗಂಟೆಗೆ ನಂದೀಶನನ್ನು ಪರೀಕ್ಷಿಸಿದಾಗ ಆತ ಅದಾಗಲೇ ತೀರಿಕೊಂಡಿದ್ದ ಎಂದು ಗಮನಿಸಿದ್ದೇನೆ. ಆ ಕಾರಣಕ್ಕೆ ಆತನನ್ನು ಶವಾಗಾರಕ್ಕೆ

ಕಳುಹಿಸಿದ್ದೇನೆ. ನಾನು ಈ ಹಿಂದೆ ತೊಪ್ಪನಹಳ್ಳಿಯಲ್ಲಿ ಆದ ಗಲಾಟೆಯ ಬಾಬ್ತು ನಂದೀಶನ ಮರಣೋತ್ತರ ಪರೀಕ್ಷೆ ನಡೆಸಿದ ಬಾಬ್ತು ಮತ್ತು ಉಳಿದ ಕೆಲವರಿಗೆ ಚಿಕಿತ್ಸೆ ನೀಡಿದ ಬಾಬ್ತು ಎಸ್ ಸಿ ನಂ.82/2017 ರಲ್ಲಿ ಸಾಕ್ಷಿ ನುಡಿದಿದ್ದೇನೆ. ಸಾಕ್ಷಿಗೆ ಎಸ್ ಸಿ ನಂ.82/2017 ರಲ್ಲಿ ಸಾಕ್ಷಿ ನುಡಿದ ಸಾಕ್ಷಿಯ ವಿಚಾರಣೆಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ.7 ಎಂದು ಗುರುತಿಸಲಾಯಿತು. ನಂದೀಶನ ಶವದ ಮೇಲೆ ಮಾಡಿದ ಮರಣೋತ್ತರ ಪರೀಕ್ಷಾ ವರದಿ ಇದು ಎಂದು ಸಾಕ್ಷಿಗೆ ಒಂದು ಮರಣೋತ್ತರ ಪರೀಕ್ಷಾ ವರದಿಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡ ಕಾರಣ ಅದನ್ನು ನಿಡಿ.8 ಎಂದು ಗುರುತಿಸಲಾಯಿತು. ನಾನು ಚಿಕಿತ್ಸೆ ನೀಡಿದ ಮುತ್ತುರಾಜು ಬಿನ್ ಚನ್ನೇಗೌಡ ಅಲಿಯಾಸ್ ಹೊನ್ನಯ್ಯ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಶಿಫಾರಸ್ಸು ಮಾಡಿದ್ದೇನೆ. ಸಾಕ್ಷಿಗೆ ದಿನಾಂಕ 25.12.2016ರ ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ನಿರ್ವಹಿಸುವ ಎಂ ಎಲ್ ಸಿ ರಿಜಿಸ್ಟರಿನ ಕೆಲವು ಭಾಗಗಳ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಮದ್ದೂರು ಆಸ್ಪತ್ರೆಯ ಎಂ ಎಲ್ ಸಿ ವಹಿಯ ನಕಲು ಎಂದು ಒಪ್ಪಿಕೊಂಡ ಕಾರಣ ಅದನ್ನು ನಿಡಿ.9 ಎಂದು ಗುರುತಿಸಲಾಯಿತು. ನಾನು ಪರೀಕ್ಷಿಸಿದಾಗ ಮುತ್ತುರಾಜು ಬಿನ್ ಹೊನ್ನಯ್ಯ ಎಂಬುವವರಿಗೆ ತೀವ್ರವಾದ ಹಲ್ಲೆಯಾಗಿತ್ತು ಎಂದರೆ ಸರಿ.

2. ಈಗ ನಾನು ಗುರುತಿಸಿದ ನಿಡಿ.9 ವಹಿಯಲ್ಲಿ ಚಾಸಾ.2 ರವರಿಗೆ ಗುಂಪಿನಲ್ಲಿ ಹಲ್ಲೆಯಾಗಿತ್ತು ಎಂಬ ಇತಿಹಾಸವನ್ನು ನಮೂದಿಸಿದ್ದೇನೆ. ಆ ಮಾಹಿತಿಯನ್ನು ನನಗೆ ಚಾಸಾ.2 ರವರೇ ಹೇಳಿದರು. ಚಾಸಾ.1 ರವರು ತನಗೆ ಯಾವ ಆಯುಧದಿಂದ ಹಲ್ಲೆಯಾಯಿತು ಎಂದು ಚಿಕಿತ್ಸೆಗೆ ಬಂದಾಗ ಹೇಳಿಲ್ಲ.

3. ನಾನು ಈಗ ನೋಡುತ್ತಿರುವ ದಾಖಲೆ 1ನೇ ಆರೋಪಿಯ ಬಾಬ್ತು ನಾನು ನೀಡಿದ ಗಾಯದ ಪ್ರಮಾಣ ಪತ್ರ ಎಂದರೆ ಸರಿ. ಸಾಕ್ಷಿ ಗುರುತಿಸಿದ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಡಿ.10 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ಚನ್ನೇಗೌಡ ಎಂಬುವವರಿಗೆ ನೀಡಿದ ಗಾಯದ ಪತ್ರವನ್ನೂ ಕೂಡ ನೋಡಿ ಗುರುತಿಸಿ, ನಾನೇ ನೀಡಿದ ಗಾಯದ ಪ್ರಮಾಣ ಪತ್ರ ಎಂದು ಒಪ್ಪಿದ ಕಾರಣ ಅದನ್ನು ನಿಡಿ.11

ಎಂದು ಗುರುತಿಸಲಾಯಿತು. ಸದರಿ ಹೊನ್ನಯ್ಯ ಮತ್ತು ಚನ್ನೇಗೌಡ ರವರಿಗೆ ಆದ ಗಾಯಗಳು ಹರಿತವಾದ ಮತ್ತು ಚೂಪಾದ ಆಯುಧಗಳಿಂದ ಮಾಡಿದ ಗಾಯಗಳು ಆಗಿರುತ್ತವೆ. ಮುತ್ತುರಾಜು ಅಲಿಯಸ್ ಕೋಟಿ ಮತ್ತು ನಂದೀಶನಿಗೆ ಆದ ಗಾಯಗಳೂ ಕೂಡ ಹರಿತವಾದ ಆಯುಧಗಳಿಂದ ಆದ ಗಾಯಗಳು ಎಂದರೆ ಸರಿ. ನಂದೀಶನ ಹೃದಯಕ್ಕೆ ಒಮ್ಮೆಲೆ ಹರಿತವಾದ ಮತ್ತು ಚೂಪಾದ ಆಯುಧದಿಂದ ಚುಚ್ಚಿದ್ದರಿಂದ ಆತನ ಹೃದಯಕ್ಕೆ ಗಾಯವಾಗಿ, ಹೃದಯದಲ್ಲಿ ರಕ್ತಸ್ರಾವವಾಗಿ ಆತನ ಸಾವು ಸಂಭವಿಸಿದೆ ಎಂದು ಅಭಿಪ್ರಾಯಪಟ್ಟಿದ್ದೇನೆಂದರೆ ಸರಿ. ಮುತ್ತುರಾಜ, ನಂದೀಶ, ಚನ್ನೇಗೌಡ ಮತ್ತು ಹೊನ್ನಯ್ಯ ಅಲಿಯಾಸ್ ಚನ್ನೇಗೌಡರವರಿಗೆ ಆದ ಗಾಯಗಳು ತೀವ್ರ ಸ್ವರೂಪದ ಗಾಯಗಳು ಎಂದರೆ ಸರಿ. ಈ ಪ್ರಕರಣದ 1 ನೇ ಆರೋಪಿ ಚನ್ನೇಗೌಡರಿಗೆ ಆದ ಗಾಯಗಳಿಗೆ ತಕ್ಷಣ ಚಿಕಿತ್ಸೆ ನೀಡದೇ ಹೋಗಿದ್ದರೆ ಆತನ ಸಾವೂ ಕೂಡ ಸಂಭವಿಸುವ ಸಾಧ್ಯತೆ ಇತ್ತು ಎಂದರೆ ಸರಿ. ಚನ್ನೇಗೌಡ ಬಿನ್ ಮಲ್ಲಯ್ಯ ರವರಿಗೆ ಆದ ಗಾಯಗಳೂ ಕೂಡ ಚೂಪಾದ ಮತ್ತು ಹರಿತವಾದ ಆಯುಧಗಳಿಂದ ಮಾಡಿದ ಆಳವಾದ ಗಾಯಗಳು ಎಂದರೆ ಸರಿ. ಚನ್ನೇಗೌಡ ಬಿನ್ ಮಲ್ಲಯ್ಯನ ಬೆನ್ನಿಗೆ ಆದ ಗಾಯಗಳು ಆತ ಬಗ್ಗಿ ಯಾರನ್ನಾದರೂ ಎತ್ತಿಕೊಳ್ಳುವಾಗ ಹಿಂದಿನಿಂದ ಚುಚ್ಚಿದರೆ ಆಗುವ ಸಾಧ್ಯತೆ ಇರುವ ರೀತಿಯ ಗಾಯಗಳು ಎಂದರೆ ಸರಿ. ಹೊನ್ನಯ್ಯ ಮತ್ತು ಚನ್ನೇಗೌಡ ಇಬ್ಬರೂ ಕೂಡ ತಮಗೆ ಹೇಗೆ ಗಾಯ ಆಯಿತು ಎಂದು ಹೇಳಿದ್ದಾರೆ. ಅವರು ಮುತ್ತು ರಾಜು ಮತ್ತು ಇತರರು ತಮಗೆ ತೀವಿದುದರಿಂದ ಈ ರೀತಿ ಗಾಯಗಳು ಆದವು ಎಂದು ಗಾಯದ ಇತಿಹಾಸವನ್ನು ಹೇಳಿದ್ದಾರೆ.

4. ದಿನಾಂಕ 28.09.2017 ರಂದು ಪೊಲೀಸರು ನಿಪಿ.24 ರಲ್ಲಿ ಹೇಳಿದ ಅಭಿಪ್ರಾಯವನ್ನು ಕೇಳುವಾಗ ಟಮೊಟೋ ದಡಿ ಅಥವಾ ದೊಣ್ಣೆಯನ್ನು ನನಗೆ ಪರೀಕ್ಷೆಗೆ ನೀಡಿರಲಿಲ್ಲ. ಗುಂಪು ಘರ್ಷಣೆಯಾದಾಗ ಚಾಸಾ.1 ರವರಿಗೆ ಆದಂತಹ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ.

5. ಚಾಸಾ.1 ಮತ್ತು ಚಾಸಾ.2 ರವರನ್ನು ನಾನು ಚಿಕಿತ್ಸೆಗೆ ಒಳಪಡಿಸುವ ಮೊದಲೇ ನಾನು ಮೇಲೆ ಹೇಳಿದ ಉಳಿದ ಗಾಯಾಳುಗಳನ್ನು ಪರೀಕ್ಷೆ ಮಾಡಿದ್ದೆ ಎಂದರೆ ಸಾಕ್ಷಿ ಮೊದಲು ಚಾಸಾ.1 ಮತ್ತು ಚಾಸಾ.2 ರವರನ್ನು ಚಿಕಿತ್ಸೆಗೆ ಬಂದಿದ್ದರು, ನಾವು ಬಾಗಿಲು

ಹಾಕಿಕೊಂಡು ಅವರಿಗೆ ಚಿಕಿತ್ಸೆ ನೀಡುತ್ತಿದ್ದಾಗ, ಪೊಲೀಸರು ಮತ್ತು ಸಾರ್ವಜನಿಕರು ಜಮಾಯಿಸಿದ್ದರು ಅಷ್ಟರಲ್ಲಿ ಮೇಲೆ ಹೇಳಿದ ಉಳಿದವರನ್ನೂ ಕೂಡ ಆಸ್ಪತ್ರೆಗೆ ಕರೆದುಕೊಂಡು ಬಂದ ಕಾರಣ ಚಾಸಾ.1 ಮತ್ತು ಚಾಸಾ.2 ರವರನ್ನು ಪೊಲೀಸ್ ಭದ್ರತೆಯಲ್ಲಿ ಪ್ರತ್ಯೇಕವಾಗಿ ಇರಿಸಿ, ನಂತರ ಕರೆದುಕೊಂಡು ಬಂದ ಉಳಿದವರಿಗೆ ಚಿಕಿತ್ಸೆ ನೀಡಿ, ಮತ್ತೆ ಚಾಸಾ.1 ಮತ್ತು ಚಾಸಾ.2 ರವರಿಗೆ ಚಿಕಿತ್ಸೆ ನೀಡಿದ್ದೇನೆಂದು ನುಡಿಯುತ್ತಾರೆ. ತೊಪ್ಪನಹಳ್ಳಿಯಲ್ಲಿ ಗಲಾಟೆಯಾದ ವಿಚಾರ ಆವಾಗಲೇ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು ಎಂದರೆ ಸರಿ. ಅಷ್ಟರಲ್ಲಿ ಚಾಸಾ.1 ಮತ್ತು ಚಾಸಾ.2 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಆದ ವಿಚಾರ ತಿಳಿದು ಸಾರ್ವಜನಿಕರು ಆಸ್ಪತ್ರೆಯ ಬಳಿ ಜಮಾಯಿಸಿದ್ದರು ಎಂದರೆ ಸರಿ. ಸದರಿ ಸಾರ್ವಜನಿಕರು ಆಸ್ಪತ್ರೆಯ ಗಾಜುಗಳನ್ನು ಒಡೆದು ಹಾಕಿದ್ದಾರೆಂದರೆ ಸರಿ. ಆ ರೀತಿ ಬಂದ ಸಾರ್ವಜನಿಕರು ಚಾಸಾ.1 ಮತ್ತು ಚಾಸಾ.2 ರವರಿಗೆ ಹಲ್ಲೆ ಮಾಡಬಹುದು ಎಂದು ಪೊಲೀಸರು ಚಾಸಾ.1 ಮತ್ತು ಚಾಸಾ.2 ರವರಿಗೆ ರಕ್ಷಣೆ ನೀಡಿ, ಆಸ್ಪತ್ರೆಯಲ್ಲಿ ಪ್ರತ್ಯೇಕ ಕೋಣೆಯಲ್ಲಿ ಇರಿಸಲು ವ್ಯವಸ್ಥೆ ಮಾಡಿದರು ಎಂದರೆ ಸರಿ. ಬಳಿಕ ಅವರನ್ನು ಪೊಲೀಸರು ಬೆಂಗಾವಲಿನಲ್ಲಿ ಮಂಡ್ಯಕ್ಕೆ ಕರೆದುಕೊಂಡು ಹೋದರು ಎಂದರೆ ಸರಿ.

6. ದಿನಾಂಕ 27.12.2016 ರಂದು ಮುತ್ತುರಾಜು, ಹೇಮಂತ, ಕುಮಾರ, ಶಿವು ಮತ್ತು ಪ್ರಸನ್ನರವರನ್ನು ದಸ್ತಗಿರಿ ಆದ ಬಳಿಕ ದೈಹಿಕ ಪರೀಕ್ಷೆಯ ಬಾಬ್ತು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿ ಎಂ ಎಲ್ ಸಿ ರಿಜಿಸ್ಟರ್ ನಲ್ಲಿ ಆ ರೀತಿ ನಮೂದು ಇದೆ, ಆದರೆ ಆ ದಿನ ನಾನು ಅವರನ್ನು ಪರೀಕ್ಷೆ ಮಾಡಿಲ್ಲ.

ಪಾಟೀ ಸವಾಲುಃ *5, 7* ರಿಂದ *14* ನೇ ಆರೋಪಿತರ ಪರ ವಕೀಲರಿಂದಃ

1 ರಿಂದ *3* ನೇ ಆರೋಪಿತರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿರುತ್ತಾರೆ. ಆದ್ದರಿಂದ *1* ರಿಂದ *3* ನೇ ಆರೋಪಿತರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.